International Journal of Kannada Research
www.kannadajournal.com

**ISSN: 2454–5813**
IJSR 2017; 3(4): 40-43
© 2017 IJKS
www.kannadajournal.com
Received: 13-08-2017
Accepted: 16-09-2017

**ಡಾ. ದೇವಮ್ಮಣ್ಣಿ ಎಂ**
ಸಹ ಪ್ರಾಧ್ಯಾಪಕರು ಮಹಾರಾಣಿ ಮಹಿಳಾ ಕಲಾ ಕಾಲೇಜು ಮೈಸೂರು, ಕರ್ನಾಟಕ, ಭಾರತ

**Correspondence**
**ಡಾ. ದೇವಮ್ಮಣ್ಣಿ ಎಂ**
ಸಹ ಪ್ರಾಧ್ಯಾಪಕರು ಮಹಾರಾಣಿ ಮಹಿಳಾ ಕಲಾ ಕಾಲೇಜು ಮೈಸೂರು, ಕರ್ನಾಟಕ, ಭಾರತ

# ಕರ್ಮಯೋಗಿಯ ಲೌಕಿಕ ಅಲೌಕಿಕ ಕಥನ

**ಡಾ. ದೇವಮ್ಮಣ್ಣಿ ಎಂ**

**ಪೀಠಿಕೆ**

ಕನ್ನಡ ಸಾಹಿತ್ಯದಲ್ಲಿ ೧೨ನೇ ಶತಮಾನದ ವಚನ ಸಾಹಿತ್ಯ ಕಾಲವು ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮೊದಲಾದ ಸ್ಥಿತ್ಯಂತರಗಳಿಂದ ಕ್ರಾಂತಿಯಯುಗವೆಂದು ಕರೆಸಿಕೊಳ್ಳುತ್ತದೆ. ಅನಂತರದ ಕಾಲದಲ್ಲಿನ ಹರಿಹರ, ರಾಘವಾಂಕರ ಕಾಲವು ಹಲವು ಕಾರಣಗಳಿಗಾಗಿ ಮಹತ್ವದ್ದಾಗಿದೆ. ಈ ಯುಗದ ಕವಿಗಳು ತಮ್ಮ ಹಿಂದಿನ ವಚನ ಸಾಹಿತ್ಯಕ್ಕೆ ಭಿನ್ನವಾದ ನೆಲೆಯಲ್ಲಿ ಕಾವ್ಯರಚನೆಗೆ ತೊಡಗಿದವರು. ಇವರು ವಚನಕಾರರಂತೆ ವಚನಗಳ ರಚನೆಗೆ ಮುಂದಾಗದಿದ್ದರೂ ವಚನಕಾರರ ಬದುಕನ್ನು ಕೇಂದ್ರವಾಗುಳ್ಳ ಜೀವನ ಚರಿತ್ರೆ, ರಗಳೆ, ಷಟ್ಪದಿ ಕೃತಿಗಳಲ್ಲಿ ಸಾಹಿತ್ಯಕೃಷಿ ಮಾಡಿದರು.

೧೩ನೇ ಶತಮಾನದ ಪ್ರಮುಖ ಕವಿಯಾದ ಹರಿಹರ ತನ್ನ ಬಹುತೇಕ ರಗಳೆಗಳಲ್ಲಿ ವಚನಕಾರರ ಬದುಕಿನ ವಿವರಗಳನ್ನು ಪವಾಡಗಳ ಮೂಲಕ, ಉಪಕಥೆಗಳ ಮೂಲಕ ಕಟ್ಟಿಕೊಡುವ ಪ್ರಯತ್ನ ಮಾಡಿದರೆ ಇವನ ಸೋದರಳಿಯನಾದ ರಾಘವಾಂಕ ೧೨ನೆಯ ಶತಮಾನದ ವಚನಕಾರರಾದ ಬಸವಣ್ಣ, ಅಲ್ಲಮರ ಸಮಕಾಲೀನನಾದ ಪ್ರಸಿದ್ಧ ವಚನಕಾರ ಕರ್ಮಯೋಗಿ ಸಿದ್ಧರಾಮನ ಜನನ, ಬಾಲ್ಯ, ಸಾಧನೆ ಸಿದ್ಧಿಯನ್ನು ತನ್ನ ಷಟ್ಪದಿ ಕೃತಿಯಾದ 'ಸಿದ್ಧರಾಮ ಚಾರಿತ್ರ'ದಲ್ಲಿ ಒಂದು ದರ್ಶನ ರೂಪದಲ್ಲಿ ಕಟ್ಟಿಕೊಟ್ಟಿದ್ದಾನೆ. ಸಿದ್ಧರಾಮನ ಇತಿಹಾಸ ವೃತ್ತಾಂತದ ಜೊತೆಗೆ ಪವಾಡ ಪ್ರಸಂಗಗಳು, ಅತಿಮಾನುಷ ವಿಷಯಗಳೂ ಸೇರಿ ಕಾವ್ಯ ರೂಪುಗೊಂಡಿರುವುದರಿಂದ ಅದನ್ನು 'ಸಿದ್ಧರಾಮ ಪುರಾಣ' ಎಂದೂ ಕರೆಯುತ್ತಾರೆ. ಮಹತ್ವದ ಕೃತಿಯಾದ 'ಸಿದ್ಧರಾಮ ಚಾರಿತ್ರ' ಕಾವ್ಯವು ತನ್ನ ಮುಂದಿನ ಶತಮಾನಗಳಲ್ಲಿ ಹಲವಾರು ಕವಿಗಳ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ರಾಘವಾಂಕನ ನಂತರ ಪಾಲ್ಕುರಿಕೆ ಸೋಮನಾಥ, ಚಾಮರಸ, ಸಿದ್ಧನಂಜೇಶ, ಶೂನ್ಯ ಸಂಪಾದನಾಕಾರರು ಸಿದ್ಧರಾಮನನ್ನು ಕುರಿತು ಕಥೆಗಳನ್ನು ಪ್ರಾಸಂಗಿಕವಾಗಿ ಹೇಳಿದ್ದಾರೆ. ಆದರೆ ಸಿದ್ಧರಾಮನ ಇಡೀ ಕಥೆಯನ್ನು ಬರೆದವರು ವಿರಳ. ೨೦ನೇ ಶತಮಾನದಲ್ಲಿ ಕವಿ ಜಿ.ಎಸ್. ಶಿವರುದ್ರಪ್ಪನವರು ಸಿದ್ದರಾಮನ ಒಟ್ಟು ಬದುಕಿನ ವಿವರಗಳನ್ನೊಳಗೊಂಡ 'ಕರ್ಮಯೋಗಿ' ಕೃತಿಯನ್ನು ೧೯೫೬ರಲ್ಲಿ ಒಂದು ಕಾದಂಬರಿ / ಕಥನ ಅಥವಾ ನೀಳತೆಯಾಗಿ ನಿರೂಪಿಸಿದ್ದಾರೆ. ತಮ್ಮ ಕೃತಿಯನ್ನು ಒಂದು ಕಾದಂಬರಿ ಅಥವಾ ಜೀವನ ಚರಿತ್ರೆ ಎಂದು ಕರೆಯಲು ನಿರಾಕರಿಸುವ ಕವಿ ಇದೊಂದು ಭಾವಚಿತ್ರವೆನ್ನುತ್ತಾರೆ. ಇದು ಜಿ.ಎಸ್.ಎಸ್.ರವರ ಮೊದಲ ಗದ್ಯಕೃತಿಯಾಗಿದೆ. ಇದರಲ್ಲಿ ಚಿತ್ರಿತವಾಗಿರುವುದು ಸುಮಾರು ಎಂಟು ನೂರು ವಚನಗಳ ಹಿಂದಿನ ಕಥಾವಸ್ತು ಚಾರಿತ್ರಿಕವಾಗಿ ಹಳೆಯದಾದರೂ ಮಾನಸಿಕವಾಗಿ ಚಿರಂತನವಾದುದು.

ಹರಿಹರನ ರಗಳೆಗಳಲ್ಲಿ ಗಂಧರ್ವರು ಶಿವನ ಸಭೆಯಲ್ಲಿ ಯಾವುದೋ ತಪ್ಪನ್ನು ಎಸಗಿದ ಕಾರಣ ತಮ್ಮ ಪಾಪದ ಪರಿಹಾರಕ್ಕಾಗಿ ಭೂಲೋಕದಲ್ಲಿ ಜನಿಸಿರುತ್ತಾರೆ ಇವರು ಕಾರಣಿಕ ಪುರುಷರು ಹಾಗೆ ರಾಘವಾಂಕನ ಸಿದ್ಧರಾಮ ಚಾರಿತ್ರದಲ್ಲಿಯೂ ಅದ್ರಿಶಿರ, ಊರ್ಧ್ವಶಿರ ಎಂಬ ಗಂಧರ್ವರು ಒಮ್ಮೆ ಶಿವನ ಒಡೋಲಗದಲ್ಲಿ ತಪ್ಪೆಸಗಿದ ಕಾರಣ ಸೊನ್ನಲಿಗೆಯಲ್ಲಿ ಮುದ್ದಗೌಡ ಮತ್ತು ಸುಗ್ಗವೆಯೆಂಬ ನರರಾಗಿ ಜನಿಸುತ್ತಾರೆ. ಇವರ ಶಾಪ ವಿಮೋಚನೆಯಾಗುವುದು ಇವರ ಉದರದಲ್ಲಿ ಸಿದ್ಧರಾಮನೆಂಬ ಅಸಾಮಾನ್ಯ ವ್ಯಕ್ತಿಯ ಜನನವಾದಾಗ, ಇಲ್ಲಿಯೂ ಸಿದ್ಧರಾಮ ಕಾರಣಿಕ ಪುರುಷನಾಗಿ ಜನ್ಮತಾಳಿದ್ದಾನೆ. ಇಲ್ಲೆಲ್ಲ ರಾಘವಾಂಕ, ಹರಿಹರನ ಮಾರ್ಗವನ್ನೇ ಅನುಸರಿಸಿದ್ದಾನೆ. ಆಧುನಿಕ ಯುಗದಲ್ಲಿ ಶಿವರುದ್ರಪ್ಪನವರು ಸಿದ್ಧರಾಮನ ಚರಿತ್ರೆಯನ್ನು ನಿರೂಪಿಸುವಲ್ಲಿ ಸಿದ್ಧರಾಮನು ಕಾರಣಿಕ ಪುರುಷ ಎಂಬುದನ್ನು ನಿರಾಕರಿಸುತ್ತಾರೆ. ಈತ ಎಲ್ಲರ ಹಾಗೆ ಸಾಮಾನ್ಯ ತಂದೆ–ತಾಯಿಗಳಲ್ಲಿ ಜನಿಸಿದ ಸಾಮಾನ್ಯ

ಮನುಷ್ಯ. ಆದರೆ ತನ್ನ ಕಾಯಕ ಮತ್ತು ಕನಸುಗಳ ಕಾರಣದಿಂದಾಗಿ ಅಸಾಮಾನ್ಯನಾಗಿ ಕಾಣುತ್ತಾನೆ. ಲೇಖಕರು 'ಕರ್ಮಯೋಗಿ' ಕೃತಿಯ ಮೂಲಕ ವಚನ ಕಾಲದ ಪ್ರಮುಖ ತತ್ವವಾದ ಕಾಯಕತತ್ವವನ್ನು ಎತ್ತಿ ಹಿಡಿಯುವ ಪ್ರಯತ್ನ ಮಾಡಿದ್ದಾರೆ.

ಒಂಬತ್ತು ಸಂಧಿಗಳಲ್ಲಿ ಹರಡಿಕೊಂಡಿರುವ ರಾಘವಾಂಕನ 'ಸಿದ್ಧರಾಮನ ಚಾರಿತ್ರ'ವನ್ನು ಕನಸು-ನನಸು, ಕರ್ಮಯೋಗ, ಸಂಸಾರಯೋಗ, ಅನುಭಾವಸಿದ್ಧಿ ಮೊದಲಾದ ಹತ್ತು ಅಧ್ಯಾಯಗಳಲ್ಲಿ ಕಟ್ಟಿಕೊಡುವ ಕವಿ ಸ್ಥಾವರ, ಜಂಗಮ, ಕಾಯಕದಂತಹ ವಚನಕಾಲದ ಸಂಗತಿಗಳನ್ನು ಆಧುನಿಕ ಚಿಂತನೆಗಳೊಂದಿಗೆ ವಾಸ್ತವವಾದಿನೆಲೆಯಲ್ಲಿ ಚರ್ಚಿಸಿದ್ದಾರೆ.

ಸಿದ್ಧರಾಮ ಸೊನ್ನಲಿಗೆಯಲ್ಲಿ ಮುದ್ದಗೌಡ ಮತ್ತು ಸುಗ್ಗವೆಯ ಮಗನಾಗಿ ಅವರ ಮುಪ್ಪಿನ ವಯಸ್ಸಿನಲ್ಲಿ ಜನಿಸುತ್ತಾನೆ. ಸಿದ್ಧರಾಮನು ಅಸಾಮಾನ್ಯ ವ್ಯಕ್ತಿಯಾದ್ದರಿಂದ ತಾರುಣ್ಯದ ರಾಗ, ದ್ವೇಷ, ಕಾಮದ ಶರೀರದಲ್ಲಿ ಹುಟ್ಟದೆ ಆ ಕಾಮದ ಕಾವೆಲ್ಲವೂ ಆರಿ ಪ್ರೇಮದಿಂದ ಪಕ್ವವಾಗಿರುವ ಅಪರ ವಯಸ್ಸಿನ ಶರೀರದಲ್ಲಿ ಜನಿಸುತ್ತಾನೆ. ಇಂಥ ಅಸಾಮಾನ್ಯನಾದ ಮಗನೊಬ್ಬ ಸುಗ್ಗವ್ವಯ ಉದರದಲ್ಲಿ ಜನಿಸುವನೆಂಬ ಸತ್ಯವನ್ನು ರೇವಣಾಚಾರ್ಯ (ಗುರು) ಸುಗ್ಗವ್ವಗೆ ಕನಸಿನಲ್ಲಿ ತಿಳಿಸುತ್ತಾನೆ ಹಾಗೂ ಹಾಗೆ ಜನಿಸಿದ ಮಗುವಿಗೆ ಸಿದ್ಧರಾಮನೆಂದೇ ಹೆಸರಿಡಬೇಕೆಂದು ಸೂಚಿಸುತ್ತಾನೆ. ಸುಗ್ಗವ್ವ ಮಗುವಿಗೆ 'ಸಿದ್ಧರಾಮ'ನೆಂದು ಹೆಸರಿಡಲು ಬಯಸಿದರೆ ಮುದ್ದಗೌಡ ನಿರಾಕರಿಸುತ್ತಾನೆ. ತಮ್ಮ ಕುಲದೇವರಾದ ಧೂಳಿಮಾಕಾಳನು ಮುನಿವನೆಂದು ಬಗೆದು ಜನಿಸಿದ ಮಗುವಿಗೆ 'ಧೂಳಿಮಾಕಾಳ'ನೆಂದೇ ಹೆಸರಿಡುತ್ತಾರೆ. ಈತನೇ ಮುಂದೆ ಜಂಗಮರ ಸತ್ಸಂಗದಲ್ಲಿ ಸಿದ್ಧರಾಮನಾಗುತ್ತಾನೆ.

ಸಿದ್ಧರಾಮ ಬಾಲ್ಯದಲ್ಲಿ ಮೂಕನಂತೆ, ಸೋಮಾರಿಯಂತೆ, ಮರುಳನಿದ್ದಂತೆ ಇದ್ದವನು ಹನ್ನೆರಡು ವರ್ಷದ ಇಂಥ ಮುಗ್ಧರಾಮನನ್ನು ದನ ಕಾಯಲು ನೇಮಿಸಲಾಗುತ್ತದೆ. ಇತರ ದನಕಾಯುವ ಹುಡುಗರೊಂದಿಗೆ ಬೆರೆಯದ ಸಿದ್ಧರಾಮ ದನಕಾಯುವ ಬಯಲಿನಲ್ಲಿಯೂ ಕಲ್ಲು ಮೊರಡಿಯೊಂದರಲ್ಲಿ ಶಿವಲಿಂಗವಿಟ್ಟು ಧ್ಯಾನಸ್ಥನಾಗುತ್ತಾನೆ. ಒಮ್ಮೆ ಜಂಗಮಮೂರ್ತಿಯೊಬ್ಬ ಈ ಸಿದ್ಧರಾಮನನ್ನು, ಭೇಟಿಯಾಗಿ ಲೋಕೋದ್ಧಾರದ ಶಕ್ತಿ ಬಾಲಕನೆಂದು ಬಗೆದು "ಇನ್ನು ನಿದ್ದೆ ಸಾಕು ಮೇಲೇಳು, ಜಗತ್ತು ನಿನಗಾಗಿ ಕಾದಿದೆ" ಎಂದು ಎಚ್ಚರಿಸುತ್ತಾನೆ. ಎಚ್ಚೆತ್ತ ಬಾಲಕ ಸಿದ್ಧರಾಮ ಜಂಗಮಮೂರ್ತಿಗೆ ನವಣೆಯ ತೆನೆಗಳನ್ನು ನೀಡಿ ಸತ್ಕರಿಸುತ್ತಾನೆ. ಜಂಗಮಮೂರ್ತಿ ಅಂಬಲಿ, ಮಜ್ಜಿಗೆ ಕೇಳಿದಾಗ, ಸಿದ್ಧರಾಮ ಅವನನ್ನು ಅರೆಗಳಿಗೆಯು ಬಿಟ್ಟಿರಲಾರದೆ ನೊಂದುಕೊಳ್ಳುತ್ತಾನೆ. ತನ್ನ ಹೆಸರು ಮಲ್ಲಯ್ಯನೆಂದು, ತಾನು ಪರ್ವತದಲ್ಲಿರುವುದಾಗಿ ತಿಳಿಸಿದಾಗ, ಸಿದ್ಧರಾಮ ಅಂಬಲಿ, ಮಜ್ಜಿಗೆ ತರಲು ಮನೆಗೆ ತೆರಳುತ್ತಾನೆ. ಅಂಬಲಿ, ಮಜ್ಜಿಗೆಯೊಂದಿಗೆ ಅವನು ಹಿಂದಿರುಗಿ ಬಂದಾಗ ಜಂಗಮ ಅದೃಶ್ಯನಾಗಿರುತ್ತಾನೆ. ಸಿದ್ಧರಾಮ ಆಗ ಜಂಗಮಮೂರ್ತಿಯನ್ನು ಕಾಣದೆ ಆತಂಕಗೊಂಡು ರೋಧಿಸುತ್ತಾನೆ. ಅವನನ್ನು ಹುಡುಕಿಕೊಂಡುಶ್ರೀಶೈಲಪರ್ವತದೆಡೆಗೆ ಸಾಗುತ್ತಾನೆ. ಮಲ್ಲಯ್ಯನನ್ನು ಹುಡುಕುವಲ್ಲಿ ಸಿದ್ಧರಾಮ, ಜಂಗಮನು ತನಗೆ ಮೋಸ, ವಂಚನೆ ಮಾಡಿದನೆಂದೇ ಬಗೆಯುತ್ತಾನೆ. 'ಕಡೆಗಾದರೂ ಮಲ್ಲಯ್ಯ ಕಂಡೇ ಕಾಣುತ್ತಾನೆ. ಆಗ ಅವನನ್ನು ಕೇಳಬೇಕು. ಅಂದು ನವಣೆಯ ಹೊಲದ ಹತ್ತಿರ ಇರುತ್ತೀನೆಂದು ಮಾತುಕೊಟ್ಟು ಮೋಸಗೊಳಿಸಿದುದು ಸರಿಯೇ? ಅವನು ನನ್ನನ್ನು ಮತ್ತೆಲ್ಲಿಗಾದರೂ ಹೋಗೆಂದರೆ ಅವನನ್ನು ಬಿಟ್ಟು ನಾನು ಹೋಗುವುದೇ ಇಲ್ಲ' ಎನ್ನುವ ಸಿದ್ಧರಾಮ ದಾರಿಹೋಕರೊಂದಿಗೆ ಶ್ರೀಶೈಲ ಪರ್ವತಕ್ಕೆ ಬಂದು ಸೇರಿದ್ದ, ಶ್ರೀಶೈಲಕ್ಕೆ ಬಂದ ಸಿದ್ಧರಾಮ ಮಲ್ಲಯ್ಯನನ್ನು ಕೇಳಲು ಅಲ್ಲಿನ ಜನ ಮಲ್ಲಯ್ಯನೆಂದು ಗುಡಿಯೊಳಗಿನ ಕಲ್ಲುದೇವರನ್ನು ತೋರಿಸಿದರು. ಸಿದ್ಧರಾಮ ಕಲ್ಲುದೇವರ ನಿರಾಕರಿಸಿದ. ಅವನು ಹುಡುಕಿ ಬಂದ ದೇವರು ಸ್ಥಾವರವಾಗಿರದೆ ಜಂಗಮ ರೂಪಿಯಾಗಿದ್ದ, ಅವನೊಂದಿಗೆ ಮಾತನಾಡುವಂತವನಾಗಿದ್ದು, ತಾನು ಬಯಸಿದ ಜಂಗಮನಿಗಾಗಿ ಹಂಬಲಿಸುವ, ಕಾತರಿಸುವ ಸಿದ್ಧರಾಮ ಇಲ್ಲಿ ಕೋಲೂರ ಕೊಡಗೂಸಿನಷ್ಟೇ ಮುಗ್ಧ ಭಕ್ತನಾಗಿ ಕಾಣುತ್ತಾನೆ. ಜಂಗಮನು ಕಾಣದಾದಾಗ "ಇದೋ ಮಲ್ಲಯ್ಯ ಇದೇ ನನ್ನ ಕಡೆಯ ಬೇಡಿಕೆ, ನಾನು ನಿನಗಾಗಿ ಹಂಬಲಿಸಿ ಬಂದೆ. ನೀನು ದೊರೆಯಲಿಲ್ಲ. ಈಗಲಾದರೂ ಮೈದೋರು, ನೀನು ಭಕ್ತವತ್ಸಲನಾದರೆ, ನೀನು ಕೊಟ್ಟ ಮಾತನ್ನು ನೀನೇ ನಡೆಸುವ ಇಚ್ಚೆ ಇದ್ದರೆ ಬಾ ನನ್ನನ್ನು ಕರೆದುಕೋ.....ಇಲ್ಲ? ಇಲ್ಲ ನಿನಗೆ ಕರುಣೆಯಿಲ್ಲ ತೆಗೆದುಕೊ ಈ ದೇಹವನ್ನು" ಎನ್ನುತ್ತಾ ಪರ್ವತದಿಂದ ಕಮರಿಗೆ ಬೀಳಲು ಮುಂದಾಗುತ್ತಾನೆ. ಆಗ ಜಂಗಮಮೂರ್ತಿ ಅವನಿಗೆ ಪ್ರತ್ಯಕ್ಷನಾಗುತ್ತಾನೆ. ತಾನು ಸೊನ್ನಲಿಗೆಯಲ್ಲಿ ಲಿಂಗದ ರೂಪದಲ್ಲಿ ಬಂದು ನೆಲೆಸುವೆ ಎನ್ನುವ ಜಂಗಮ, ತಾನು ಸಕಲ ಚರಾಚರ ಜೀವಿಗಳಲ್ಲಿಯೂ ಇರುವುದಾಗಿ ಹೇಳುತ್ತಾನೆ. ಕರ್ಮಯೋಗದಲ್ಲಿ ಸಿದ್ಧರಾಮನು ನಿರತನಾಗಲು ಹೇಳುತ್ತಾನೆ.

ಶ್ರೀಶೈಲದಲ್ಲಿ ಜಂಗಮಮೂರ್ತಿಯನ್ನು ಕಂಡು ಹಿಂದಿರುಗಿದ ಸಿದ್ಧರಾಮ ತಾನು ಲೋಕಕಲ್ಯಾಣಕ್ಕಾಗಿ ದೇವರಿಂದ ನೇಮಿಸಲ್ಪಟ್ಟವನು, ಸೊನ್ನಲಿಗೆ ತನ್ನ ಕರ್ಮಭೂಮಿ, ಕಾರ್ಯಕ್ಷೇತ್ರ ಎಂದು ಅರಿಯುತ್ತಾ ದೇವಾಲಯ, ಕೆರೆ, ಕಟ್ಟೆ, ಬಾವಿಗಳನ್ನು ಕಟ್ಟಿಸುವ ಕಾರ್ಯದಲ್ಲಿ ತೊಡಗಿಕೊಳ್ಳುತ್ತಾನೆ. ಒಮ್ಮೆ ಅಲ್ಲಮನು ಅವನನ್ನು ಭೇಟಿಯಾದಾಗ ದೈವದಲ್ಲಿ ನಂಬಿಕೆ ಇಟ್ಟ ಸಿದ್ಧರಾಮನನ್ನು ಅದ್ವೈತದೆಡೆಗೆ ತೆರಳಬೇಕೆಂದು ಸೂಚಿಸಿದಾಗ, ಸಿದ್ಧರಾಮ ಮುಕ್ತಿಗೆ ಕರ್ಮ ಅಥವಾ ಕಾಯಕ ಅಡ್ಡಿಯಲ್ಲವೆಂದು ಬಗೆದು ಮುಕ್ತಿಗೆ ಕರ್ಮಯೋಗವೇ ಮಾರ್ಗವೆಂದು ಶಿವನ ಕರೆ ಬಂದಾಗ ಮುಕ್ತಿಗೆ ತೆರಳಬೇಕೆನ್ನುತ್ತಾನೆ. ಅಲ್ಲಮನ ಭೇಟಿಯ ನಂತರ ಅಲ್ಲಮನ ತಿಳುವಳಿಕೆಯ ಮಾತುಗಳನ್ನು ನಿರಾಕರಿಸುತ್ತಲೇ, ಅದೇ ಶಿವನ ಕರೆಯೆಂದು ಅಂತಿಮವಾಗಿ ಸೊನ್ನಲಿಗೆಯಲ್ಲಿ ತಾನು ಭಕ್ತರೊಂದಿಗೆ ಸೇರಿ ನಿರ್ಮಿಸಿದ ದೇವಾಲಯದಲ್ಲಿ ಲೀನವಾಗುತ್ತಾನೆ.

**ಕರ್ಮಯೋಗ**

ಕರ್ಮಯೋಗಿ ಕರ್ಮಯೋಗದ ಬಗೆಗೆ ಮಾತನಾಡುವುದೆಂದರೆ ಅದು ಕರ್ಮ ಸಿದ್ಧಾಂತದಲ್ಲಿ ನಂಬಿಕೆ ಇಟ್ಟ ಬುದ್ಧನ ಬಗ್ಗೆ ಮಾತನಾಡುವಷ್ಟೇ ಕಷ್ಟಕರವಾದುದು. ಆಧ್ಯಾತ್ಮ ಕುರಿತ ಚಿಂತನೆ, ಮಾತು ಮತ್ತು ಬರಹಕ್ಕೆ ಸುಲಭಕ್ಕೆ ನಿಲುಕುವಂತದ್ದಲ್ಲ. ರಾಘವಾಂಕನು ನಿರೂಪಿಸುವ ಸಿದ್ಧರಾಮನ ಕಾಯಕ ನಿಷ್ಠೆ ಒಂದು ಹಂತದವರೆಗೆ ಮಾತ್ರವಿದ್ದು ಅಲ್ಲಮನ ಭೇಟಿಯ ನಂತರ ನಿರರ್ಥಕ ಎನಿಸಿಕೊಳ್ಳುತ್ತದೆ. ಲೋಕ ಕಲ್ಯಾಣಕ್ಕಾಗಿ ದೇವಾಲಯ, ಕೆರೆ, ಕಟ್ಟೆ ಕಟ್ಟಿಸುವ ಸಿದ್ಧರಾಮ ವಡ್ಡರ ಸಿದ್ಧನಾಗಿ ಕಾಣುತ್ತಾನೆ. ಆದರೆ ಇಲ್ಲಿನ ಲೇಖಕರು ಕಟ್ಟಿಕೊಡುವ ಸಿದ್ಧರಾಮನ ವ್ಯಕ್ತಿತ್ವ ಮತ್ತು ಆತನ ಕರ್ಮಯೋಗ ಮುಕ್ತಿಯನ್ನು ಪಡೆಯುವಲ್ಲಿ ಭಕ್ತನೊಬ್ಬ ಅನುಸರಿಸಬೇಕಾದ ಪಥದಂತಿದೆ. ಇಲ್ಲಿ ಸಿದ್ಧರಾಮ ಅಲ್ಲಮನ ಭೇಟಿಯ ನಂತರವು ಕರ್ಮಯೋಗ ನಿರರ್ಥಕ ಎಂದು ತಿಳಿಯದೆಮನುಷ್ಯನಿಗೆ ಅಗತ್ಯವಾಗಿ ಬೇಕೆಂದು ಪ್ರತಿಪಾದಿಸುತ್ತಾನೆ. ಸಿದ್ಧರಾಮ ತನ್ನ ಶಿಷ್ಯನಾದ ಕಲ್ಲಯ್ಯನಿಗೆ ಕರ್ಮಯೋಗ ಕುರಿತು ಹೇಳುವ ಮಾತುಗಳಿವು "ಕರ್ಮ ಎಂದರೆ ಕಾಯಕ, ಕಾಯಕವೇ ನಮ್ಮ ಕರ್ಮ. ಹಿರಿಯನಾಗಲಿ, ಕಿರಿಯನಾಗಲಿ, ಗಂಡಾಗಲಿ, ಹೆಣ್ಣಾಗಲಿ, ಸಂಸಾರಿಯಾಗಲಿ, ಸನ್ಯಾಸಿಯಾಗಲಿ, ಗುರುವಾಗಲಿ, ಶಿಷ್ಯರಾಗಲಿ ಕಾಯಕ ಮಾಡಬೇಕು. ಆ ಮೂಲಕ ಸಮಾಜವೊಂದರ

ಸಂಪತ್ತಿನ ಉತ್ಪಾದನೆಗೆ ನೆರವಾಗಬೇಕು ಆ ಕಾಯಕವೇ, ಕರ್ಮವೇ ಪೂಜೆ, ಪೂಜೆ ಬೇರೆಯಲ್ಲ ಕೆಲಸ ಬೇರೆಯಲ್ಲ ಪೂಜೆಯೇ ಕೆಲಸ, ಕೆಲಸವೇ ಪೂಜೆ". ಇಲ್ಲಿ ಕರ್ಮವೆಂಬುದು ಇನ್ನೊಬ್ಬರಿಗಾಗಿ ಮಾಡುವ ಉಪಕಾರವಾಗಿರದೆ ಅದು ಭಗವಂತನ ಪೂಜೆಯೇ. ಈ ಬಗೆಯ ಪೂಜಾ ರೂಪದ ಕರ್ಮದ ನಿರಂತರತೆಯನ್ನು ಲೇಖಕರು ಹೀಗೆ ವಿವರಿಸುತ್ತಾರೆ. "ಈ ಜಗತ್ತನ್ನೇ ನೋಡಿ ಅದು ಕರ್ಮ ಮಾಡದೆ ಒಂದು ಚಣವಾದರೂ ಬದುಕಬಲ್ಲುದೆ? ನೀರಿನ ಹರಿಯುವಿಕೆ, ಗಾಳಿಯ ಬೀಸುವಿಕೆ, ಸೂರ್ಯ ಚಂದ್ರರ ಉದಯ, ಋತುಪರಿವರ್ತನೆ ಎಲ್ಲವನ್ನು ನೋಡಿ ಅದೊಂದು ಅಖಂಡ ಚಲನೆ, ನಿರಂತರಕರ್ಮ, ಕರ್ಮವೇ ಅದರ ಪ್ರಾಣ. ಕರ್ಮಯೋಗದ ಅರಿವಿಗೆ ಸೃಷ್ಟಿಗಿಂತ ಬೇರೆಯ ಗುರು ಉಂಟೆ? ಮಾಡುವ ಕರ್ಮವನ್ನೆಲ್ಲಾ ಶಿವಯೋಗವೆಂದು ಅರಿತಾಗ ಅದನ್ನು ಮಾಡಿದ ವ್ಯಕ್ತಿಗೂ, ಜಗತ್ತಿಗೂ ಬೆಳಕಾಗುತ್ತದೆ."

ಒಮ್ಮೆ ಸೊನ್ನಲಿಗೆಯಲ್ಲಿ ಮಲ್ಲಿಕಾರ್ಜುನನ ದೇವಾಲಯದ ಉತ್ಸವಕ್ಕೆ ಬಂದ ಜಂಗಮನೋರ್ವ ಸಿದ್ದರಾಮನ ಕರ್ಮಮಾರ್ಗವನ್ನು ಅಲ್ಲಗಳೆಯುತ್ತಾನೆ. ಜಂಗಮನು "ದೇಹವೇ ದೇಗುಲವಾಗಿರುವಾಗ ಈ ಗುಡಿ ಗೋಪುರಗಳ ನಿರ್ಮಾಣ ಅಗತ್ಯವೇ? ಎಂದು ಪ್ರಶ್ನಿಸುತ್ತಾನೆ. ಜಂಗಮನ ಈ ಪ್ರಶ್ನೆಗೆ ಸಿದ್ದರಾಮ ಉತ್ತರಿಸುವುದು ಹೀಗೆ "ದೇಹವೇ ದೇಗುಲ ಎಂಬುದು ಒಪ್ಪಿತ ಸತ್ಯ ಆದರೆ ದೇಹವೇ ದೇಗುಲವೆಂಬುದು ಅನುಭವಕ್ಕೆ ಬರಬೇಕಾದರೆ ಸಾಮಾನ್ಯ ಜನಕ್ಕೆ ದೇವರ ಇರುವಿಕೆಯ ಅರಿವು ಬಲಿಯಬೇಡವೇ? ಭಕ್ತಿಯ ವಿಕಾಸ ಆಗಬೇಡವೇ? ದೇಹವೇ ದೇಗುಲ ಎಂದು ಅರಿತ ಶರಣರಿಗೆ ಈ ದೇವಾಲಯಗಳಿಗೆ ಹೋಗಬೇಕಾದ ಅಗತ್ಯವಿಲ್ಲ, ಇದೆಲ್ಲಾ ಜನತೆಗೆ ಸಾಮಾನ್ಯ, ಜನತೆಯ ಉದ್ಧಾರಕ್ಕೆ".

ಜಂಗಮನು ಮುಂದುವರೆದು ಜೀವನ ಪರ್ಯಂತ ಜನಸಾಮಾನ್ಯರ ಬಗ್ಗೆ ಚಿಂತಿಸುವ ವ್ಯಕ್ತಿ ತನ್ನ ಉದ್ಧಾರವನ್ನು ಯಾವಾಗ ಕಂಡುಕೊಳ್ಳುತ್ತಾನೆ? ಎಂದು ಪ್ರಶ್ನಿಸುತ್ತಾನೆ. ಇಲ್ಲಿ ಜಂಗಮನ ಪ್ರಶ್ನೆಗಳು ಹೆಚ್ಚು ಚಿಂತನಾರ್ಹವಾದಂತಹವು ಅವಕ್ಕೆ ಸಿದ್ದರಾಮನ ಉತ್ತರವೂ ಕೂಡ. ಕರ್ಮದಿಂದ ಎಲ್ಲರ ಉದ್ಧಾರ ಹೇಗೋ ಹಾಗೆ ಎಲ್ಲರ ಉದ್ಧಾರದಿಂದ ವ್ಯಕ್ತಿಯ ಬಿಡುಗಡೆ ಎಂದು ನಂಬಿದ ಸಿದ್ದರಾಮ "ಸಾಕಾರ ನಿಷ್ಠೆ ಭೂತಂಗಳೊಳು ಅನುಕಂಪೆ" ಎಂಬ ಜೀವನ ಧ್ಯೆಯ ಉಳ್ಳವನಾಗಿದ್ದು, ಅವನ ಚಿಂತನೆಗಳು ಸಮಷ್ಠಿ ನೆಲೆಯಲ್ಲಿ ಮೂಡಿಬಂದಂತಹವು.

ಸಿದ್ಧರಾಮ ಚರಿತ್ರೆಯನ್ನು ಹೇಳುವಲ್ಲಿ ಅಲ್ಲಮನು ಅವನನ್ನು ಭೇಟಿಯಾದ ಸಂದರ್ಭ ಕರ್ಮಯೋಗಿಯಾದಾಗಿನ ಮುಖಾಮುಖಿ ಒಂದು ವಿಶೇಷ ಸಂದರ್ಭವೇ ಸರಿ.

ದೇಹವೇ ದೇಗುಲವಾಗಿರಲು ಮತ್ತೆ ಬೇರೆ ದೇಗುಲವೇಕಯ್ಯಾ?
ಪ್ರಾಣವೇ ಲಿಂಗವಾಗಿರಲು ಮತ್ತೆ ಬೇರೆ ಲಿಂಗವೇಕಯ್ಯಾ?
ಹೇಳಲಿಲ್ಲ. ಕೇಳಲಿಲ್ಲ. ಗುಹೇಶ್ವರಾ
ನೀನು ಕಲ್ಲಾದರೆ ನಾನೇನಪ್ಪೆನಯ್ಯಾ? ಎನ್ನುವ ಹಾಗೆ

ಅನ್ನವನಿಕ್ಕಿ, ನನ್ನಿಯ ನುಡಿದು, ಅರವಟ್ಟಿಗೆಯನಿಕ್ಕಿ, ಕೆರೆಯ ಕಟ್ಟಿಸಿದರೆ ಮರಣ ಬಂದ ಮೇಲೆ ಸ್ವರ್ಗ ಉಂಟಲ್ಲದೆ ಶಿವನ ನಿಜವು ಸಾಧ್ಯವಾಗದು ಎನ್ನುವ ಮಾತುಗಳನ್ನು ಅಲ್ಲಮ ಸಿದ್ಧರಾಮನಿಗೆ ಬೋಧಿಸುತ್ತಾನೆ.

ಸಿದ್ಧರಾಮನ ಕಾಯಕ ಸಂಸಾರವೆಂಬ ನೂಲಿನ ಸಂಕೋಲೆಯಿಂದ ಪಾರಾಗಿ ಈ ಲೋಕವೆಂಬ ಚಿನ್ನದ ಸಂಕೋಲೆಯಲ್ಲಿ ಬಂಧಿತನಾದಂತೆ ಕಾಣುತ್ತದೆ. ಆದ್ದರಿಂದ ಸಿದ್ದರಾಮ ಕಟ್ಟುವ ಕೆರೆ, ಬಾವಿ, ದೇವಾಲಯಗಳು ತಾತ್ಕಾಲಿಕವಾಗಿದ್ದು, ನಶಿಸುವಂತಾಗಿದ್ದು ಅವುಗಳಿಂದ ಫಲವಿಲ್ಲ ಎನ್ನುವ ಅಲ್ಲಮ ಶಾಶ್ವತವಾದ, ಎಂದೂ ನಶಿಸದ ಕೆರೆಯೊಂದನ್ನು ತಾನು ಕಟ್ಟಿರುವುದಾಗಿ ಹೇಳುತ್ತಾನೆ.

ತನುವೆಂಬ ಏರಿಗೆ ಮನವೆಂಬ ಕಟ್ಟೆ
ಆಚಾರವೆಂಬ ಸೋಪಾನ, ಪರಮಾನಂದವೆಂಬ ಜಲವ
ತುಂಬಿ ಕೆರೆಯ ಕಟ್ಟಬಲ್ಲವರನಾರನೂ ಕಾಣೆ,
ನಾ ಕಟ್ಟಿದ ಕೆರೆ ಸ್ಥಿರವಾಯಿತು ಗುಹೇಶ್ವರಾ ನಿಮ್ಮಾಣೆ

ಎಂಬ ಅಲ್ಲಮನ ತಿಳುವಿಕೆಯ ಮಾತುಗಳು ಸಿದ್ಧರಾಮನನ್ನು ಎಚ್ಚರಿಸಲು ಪ್ರಯತ್ನಿಸಿವೆ. ಆದರೆ ಸಿದ್ದರಾಮ ತಾನು ಪಡೆದ ಸಿದ್ಧಿಯನ್ನು ತಾನೇ ಸವಿಯುತ್ತ ಕುಳಿತುಕೊಳ್ಳದೆ ಲೋಕಕಲ್ಯಾಣಕ್ಕಾಗಿ ಯಾವುದೇ ರೂಪದಲ್ಲಾದರೂ ವಿನಿಯೋಗವಾಗಬೇಕೆಂದು ನಂಬಿದ್ದ. ತನ್ನ ಮುಕ್ತಿ ಕರ್ಮಯೋಗದ ಮೂಲಕ ಸಾಧ್ಯವಾಗುವಂತದ್ದು ಎನ್ನುತ್ತಾ ಜಗತ್ತಿಗೂ ಕರ್ಮಯೋಗವನ್ನೇ ಸಾರಿ ಹೇಳುತ್ತಾನೆ.

**ಸಂಸಾರಯೋಗ**

ಲೇಖಕರು ರಾಘವಾಂಕನು ಬರೆದ ಚರಿತ್ರೆಯನ್ನೇ ಆಧರಿಸಿದ್ದರೂ ರಾಘವಾಂಕನಲ್ಲಿ ಇಲ್ಲದ 'ಸಂಸಾರಯೋಗ' ಪರಿಕಲ್ಪನೆಯನ್ನು ತಮ್ಮ ಕೃತಿಯಲ್ಲಿ ತಂದಿದ್ದಾರೆ. ಅಲ್ಲಿ ರಾಘವಾಂಕ ಸಿದ್ಧರಾಮನನ್ನು ಪರೀಕ್ಷಿಸಲು ಮನ್ಮಥನ ಮೂಲಕ ರೂಪವತಿಯೊಬ್ಬಳನ್ನು ಸೃಷ್ಟಿಸಿದರೆ, ಇಲ್ಲಿ ಸಂಸಾರಯೋಗವನ್ನು ತಿಳಿಸಲು ಸಂಗಯ್ಯ ಮತ್ತು ಚನ್ನವ್ವಯರ ಪ್ರೇಮ ಪ್ರಸಂಗವನ್ನು ಸೃಷ್ಟಿಸಿದ್ದಾರೆ.

ಸಂಸಾರವೆಂಬುದು ಗಾಳಿಯ ಸೊಡರು
ಸಿರಿ ಎಂಬುದೊಂದು ಸಂತೆಯ ಮಂದಿ
ಇವನಿಚ್ಚೈಸಿ ನೀ ಕೆಡಬೇಡ.

ಎಂಬುದಾಗಿ ಸಂಸಾರದ ವೈರಾಗ್ಯವನ್ನು ಕುರಿತ ಬಸವಣ್ಣನ ವಚನವನ್ನು ಹಾಡುವಲ್ಲಿ ತಲ್ಲೀನಳಾಗಿರುವ ಚೆನ್ನವ್ವಯನ್ನು ಕಂಡು ಮೋಹಗೊಳ್ಳುವ ಸಂಗಯ್ಯ, ಸಂಸಾರದ ಅನಿತ್ಯತೆಯನ್ನು ಹಾಡುತ್ತಾ ಅಂತರಂಗಗೊಳ್ಳದೆ, ಚೆನ್ನವ್ವ, ಸ್ಪುರದ್ರೂಪಿ ಸಂಗಯ್ಯನಿಗೆ ಮನಸೋಲುತ್ತಾಳೆ. ಸಂಗಯ್ಯ, ತನ್ನ ತಂದೆ ತಾಯಿ ಕುರೂಪಿಯಾದ ಹೆಣ್ಣನ್ನು ಮದುವೆಯಾಗೆಂದರೆಂದು ಮದುವೆ ನಿರಾಕರಿಸಿ ಮಠಕ್ಕೆ ಬಂದು ನಿಂತವನು. ಮಠದಲ್ಲಿ ಸಿದ್ದರಾಮನ ವೈರಾಗ್ಯಕ್ಕೆ, ಅವನ ಸನ್ಯಾಸತ್ವಕ್ಕೆ ಮರುಳಾದರೂ ಮಠಕ್ಕೆ ಬಂದ ಚೆನ್ನವ್ವಗೆ ಸೋಲುತ್ತಾನೆ. ಕೂಡಲೇ ಅವಳನ್ನು ತಾನು ವಿವಾಹವಾಗಬೇಕು ಅಥವಾ ಸಾಯಬೇಕೆಂದು ನಿರ್ಧರಿಸುತ್ತಾನೆ. ಕಲ್ಲಯ್ಯನಿಗೆ ಸಂಗಯ್ಯ– ಚೆನ್ನವ್ವಯರ ಪ್ರೇಮ ಪ್ರಸಂಗ, ವಿವಾಹ ಸಂಗತಿ ಮಠದ ವೈರಾಗ್ಯದ ಬದುಕಿನಲ್ಲಿ ಅಪರಾಧವಾಗಿ ಕಂಡರೆ ಸಿದ್ಧರಾಮನಿಗೆ ಇವರ ಪ್ರೇಮ ಒಪ್ಪಿತವಾಗಿದೆ. ಸಿದ್ದರಾಮನ ಪ್ರಕಾರ ಭಕ್ತಿ, ವೈರಾಗ್ಯ, ತಪಸ್ಸು ಎಲ್ಲ ಸನ್ಯಾಸಿಗಳಿಗೆ ಮಾತ್ರವಲ್ಲ ಸಂಸಾರಿಗಳಿಗೂ ನಿಲುಕುವಂತದ್ದು, ಸಂಸಾರಯೋಗವೆಂದರೆ ಸಂಸಾರದಲ್ಲಿದ್ದುಕೊಂಡೇ ಶಿವಯೋಗವನ್ನು ಸಾಧಿಸುವುದು. ಇದಕ್ಕೆ ಬಸವಣ್ಣ ಮತ್ತವನ ದಾಂಪತ್ಯ ಬದುಕು ಉಲ್ಲೇಖಗೊಂಡಿದೆ. ವೈರಾಗ್ಯ ಬರುವ ಕಾಲಕ್ಕೆ ತಾನಾಗಿಯೇ ಬರುತ್ತದೆ. ಅದು ಕಾಯಿಯೊಂದು ಹಣ್ಣಾಗಿ ಮರದಿಂದ ಬೀಳುವ ಪ್ರಕ್ರಿಯೆಯಂತದ್ದು, ಹೇಗೆಹಣ್ಣು ಮರದಿಂದ ತನ್ನನ್ನು ಕಳೆದುಕೊಳ್ಳುವಾಗ, ಬಿಡುಗಡೆಗೊಳಿಸಿಕೊಳ್ಳುವಾಗ ಮರಕ್ಕೂ ತನ್ನಿಂದ ಬೀಳುವ ಹಣ್ಣನ್ನು ತಡೆಯುವ ಶಕ್ತಿ ಇರುವುದಿಲ್ಲವೋ ಅಂತೆಯೇ ಸಂಸಾರಯೋಗದಲ್ಲಿ ಮುಕ್ತಿಯೆಡೆಗೆ ಸಾಗುವ

ವ್ಯಕ್ತಿಸಂಸಾರದಲ್ಲಿದ್ದುಕೊಂಡೆ ಗೃಹಸ್ಥನಾಗಿ ಬಾಳಿ, ಕಾಯಕ ಮಾಡುತ್ತಾ ಅಲ್ಲಿಯೇ ಶಿವಸಾಕ್ಷಾತ್ಕಾರ ಹೊಂದಬಹುದಾಗಿದೆ.

ಕವಿ ತಮ್ಮ ಕೃತಿಯಲ್ಲಿ ರಾಘವಾಂಕನ ಸಿದ್ದರಾಮ ಚರಿತ್ರೆಯಲ್ಲಿನ ಜಿಂಕೆಯೊಂದು ದೇವತೆ ರೂಪ ಪಡೆಯುವಿಕೆ, ಅತಿಹಂಸನೆಂಬ ಯತಿ ಮುನಿಶಾಪದಿಂದ ಭವಿಯಾಗಿ ಹುಟ್ಟಿ ಸಿದ್ಧರಾಮನಿಂದ ಶಾಪವಿಮುಕ್ತನಾಗುವುದು, ಸಗಣಿಯಲ್ಲಿ ಎಡವಿದ ಹರಿಣವನ್ನು ಸಿದ್ದರಾಮ ಹಿಡಿದೆತ್ತಲು ಗಂಧರ್ವ ರೂಪ ಪಡೆದು ತನ್ನ ಕಥೆಯನ್ನು ಹೇಳುವುದು, ಅಣ್ಣನಾದ ಬೊಮ್ಮಯ್ಯನಿಗೆ ಸಿದ್ದರಾಮ ಸೊನ್ನಲಿಗೆಯ ಕ್ಷೇತ್ರದ ಮಹಿಮೆಯನ್ನು ವಿವರಿಸುವುದು, ಮೀನಿನ ಹೊಲಸುನಾತದ ಶಾಪ ಪಡೆದ ಕುಮುದಶೇಖರ ಪವಿತ್ರ ತೀರ್ಥದಲ್ಲಿ ಮಿಂದು ಮುಕ್ತನಾಗುವುದು, ಮನ್ಮಥನು ಸಿದ್ದರಾಮನ ಮನದ ಹಂಬಲವನ್ನು ನೋಡಬೇಕೆಂದು ರೂಪವತಿಯೊಬ್ಬಳನ್ನು ಸೃಜಿಸಿ ಪರೀಕ್ಷೆಗೊಡ್ಡುವ ಸಂದರ್ಭ, ಸತ್ತ ತಾಯಿ ಬೆಕ್ಕಿಗೆ ಜೀವದಾನ ಮಾಡಿದ್ದು, ಹಾವು ಕಚ್ಚಿ ಸತ್ತ ಕಾಳವೆಯನ್ನು ಬದುಕಿಸಿದುದು ಮೊದಲಾದ ಪವಾಡ ರೂಪದ ಸಂಗತಿಗಳನ್ನು ಕೈಬಿಟ್ಟಿದ್ದಾರೆ. ಸಿದ್ದರಾಮ, ಕಾಸಿದ ಪಂಚಲೋಹದ ಗುಂಡನ್ನು ಹಿಡಿದು ದಿವ್ಯವನ್ನು ಗೆದ್ದ ಸಂದರ್ಭ, ಬಿಜ್ಜಳನ ತಮ್ಮ ಕರ್ಣದೇವ, ತನಗೆ ಪಟ್ಟ ಕಟ್ಟಲು ಸಿದ್ಧರಾಮನನ್ನು ಕರೆಸಲು ಪ್ರಯತ್ನಿಸಿ ವಿಫಲವಾದುದು, ಬ್ರಾಹ್ಮಣರು ಶೂದ್ರ ಕಟ್ಟಿದ ಕೆರೆಯೆಂದು ಅಭಿಮಂತ್ರಿಸಿ, ಮಿಂದ ಪ್ರತಿ ಸಲವೂ ಕಾಗೆ ಮುಟ್ಟುವುದು ಈ ಭಾಗಗಳನ್ನು ರಾಘವಾಂಕನಿಂದ ಯಥಾವತ್ತಾಗಿ ಸ್ವೀಕರಿಸಿದ್ದಾರೆ. ಜೊತೆಗೆ ಕೆಲವೊಂದು ಉಪಕಥೆಗಳನ್ನು ಹೇಳಿದ್ದಾರೆ. ಅವುಗಳಲ್ಲಿ ಸಂಸಾರಯೋಗ ಉಪದೇಶಿಸಿದ ಸಂಗಯ್ಯ ಮತ್ತು ಚೆನ್ನವ್ವ ಕಥೆ, ಜಂಗಮನ ಮಹಾಪವಾಡಕೊಟ್ಟ ಬಿಲ್ಲೇಶ ಬೊಮ್ಮಯ್ಯನ ಕಥೆ, ಕೋವೂರಿನ ಕುಟಿಲ ವಿದ್ಯಾಸಾಗರನ ಕುತಂತ್ರ ವಿಫಲಗೊಂಡ ಪ್ರಸಂಗ, ಅಂತಿಮವಾಗಿ ಅಲ್ಲಮನೊಂದಿಗಿನ ಸಂದರ್ಶನದ ಸಂದರ್ಭದಲ್ಲಿ ಕರ್ಮಯೋಗವು ಶ್ರೇಷ್ಠವಾದುದು ಎಂದು ಸಾರುವ ಸಿದ್ಧರಾಮನ ನಿಲುವು ಮೊದಲಾದವು ಪ್ರಮುಖವಾಗಿವೆ.

ಒಟ್ಟಾರೆ ಒಂದೆಡೆ ಸ್ಥಾವರ ಸಂಸ್ಕೃತಿ ನಿರಾಕರಿಸುತ್ತಾ ಮತ್ತೊಂದೆಡೆ ಕಾಯಕತತ್ವವನ್ನು ಎತ್ತಿಹಿಡಿಯುವ ಕರ್ಮಯೋಗಿಯ ಚರಿತ್ರೆ ಹೇಳುವ "ಕರ್ಮಯೋಗಿ" ಕೃತಿಯು ೨೦ನೆಯ ಶತಮಾನದಲ್ಲಿ ಬದಲಾದ ಕಾಲದ ಸಾಮಾಜಿಕ ಸ್ಥಿತ್ಯಂತರಗಳೊಂದಿಗೆ ವಾಸ್ತವದ ನೆಲೆಗಟ್ಟಿನಲ್ಲಿ ರಚನೆಗೊಂಡ ಕೃತಿಯಾಗಿದೆ ಎನ್ನಬಹುದು.

## ಗ್ರಂಥ ಋಣ


1. ಶರಣರ ಅನುಭಾವ ಸಾಹಿತ್ಯ : ಡಾ.ಎಚ್. ತಿಪ್ಪೇರುದ್ರಸ್ವಾಮಿ, ೧೯೬೩, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು,
2. ವಚನಧರ್ಮಸಾರ : ಎಂ.ಆರ್. ಶ್ರೀನಿವಾಸಮೂರ್ತಿ, ೧೯೫೬, ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಣೆ. : ಸಂ. ಡಾ. ಬಿ.ಎ. ವಿವೇಕ ರೈ, ೨೦೦೪, ಪ್ರಸಾರಾಂಗ ಕನ್ನಡ ವಿ.ವಿ ಹಂಪಿ. ३. ರಾಘವಾಂಕನ ಸಮಗ್ರಕಾವ್ಯ (ಸಿದ್ದರಾಮ ಚಾರಿತ್ರ)
3. ಕನ್ನಡ ಸಾಹಿತ್ಯ ಚರಿತ್ರೆ (ನಾಲ್ಕನೆಯ ಸಂಪುಟ): ಡಾ. ಹಾ.ಮಾ. ನಾಯಕ ಮತ್ತು ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ, ೧೯೭೭
4. ಕರ್ಮಯೋಗಿ: ಡಾ. ಜಿ.ಎಸ್. ಶಿವರುದ್ರಪ್ಪ, ೧೯೫೬, ಕನ್ನಡ ಅಧ್ಯಯನ ಸಂಸ್ಥೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.